ನಬಾರ್ಡ್ ಸಾಲ

5307 (5919); ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾವಿ)

ಅ) 2015–16ರಲ್ಲಿ ಲೋಕೋಪಯೋಗಿ ಇಲಾಖೆಗೆ ನಬಾರ್ಡನಿಂದ ಪಡೆದಿರುವ ಸಾಲ ಎಷ್ಟು; ಅದರನ್ವಯ ತೆಗೆದುಕೊಂಡ ಕಾಮಗಾರಿಗಳು ಎಷ್ಟು; (ಪ್ರಗತಿಯ ವಿವರಗಳನ್ನು ಒದಗಿಸುವುದು)

ಆ) ಕಾಮಗಾರಿಗಳನ್ನು ಆಯ್ಕೆ ಮಾಡಲು ಇರುವ ವಿಧಿಸಿರುವ ಮಾನದಂಡವೇನು; ಕರಾರುಗಳೇನು;

ಡಾ: ಹೆಚ್. ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) 2015–16ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಗೆ 275.00 ಕೋಟಿ ರೂ. ಮೊತ್ತ ವಲಯವಾರು ಹಂಚಿಕೆ ಮಾಡಲಾಗಿದ್ದು ಅದರನ್ವಯ 228 ಕಾಮಗಾರಿಗಳ ಕ್ರಿಯಾ ಯೋಜನೆ ರೂಪಿಸಲಾಗಿದ್ದು ನಬಾರ್ಡನ ಅನುಮೋದನೆ ಪಡೆಯಲು ಕ್ರಮ ವಹಿಸಲಾಗುತ್ತಿದೆ.

ಆ) ಕಾಮಗಾರಿಗಳನ್ನು ಆಯ್ಕೆ ಮಾಡಲು ವಿಧಿಸಿರುವ ಮಾನದಂಡಗಳು ಕೆಳಕಂಡಂತಿವೆ.

1. ಜಲ್ಲಿ ಮೇಲ್ಪ್ಪ/ಮಣ್ಣಿನ ಮೇಲ್ಪ್ಪ ಇರುವಂತಹ ಜಿಲ್ಲ ಮುಖ್ಯ ರಸ್ತೆಗಳ ಅಭಿವೃದ್ಧಿಯನ್ನು ಮಾತ್ರ ಪ್ರಸ್ತಾವಿಸುವುದು.

2. ಜಿಲ್ಲಾವಾರು ತಾಲ್ಲೂಕುವಾರು connectivity, traffic intensity ಮುಂತಾದ ತಾಂತ್ರಿಕ ಅಂಶಗಳಿಗೆ ಆದ್ಯತೆ ನೀಡಿ ಆದ್ಯತಾ ಪಟ್ಟಿಯನ್ನು ತಯಾರಿಸುವುದು.

3. Staggered improvements ಇರುವಂತಹ ರಸ್ತೆಗಳನ್ನು ಪ್ರಸ್ತಾವಿಸಬಾರದು.

4. ಡಾಂಬರೀಕರಣವಾಗಿ ಹಾಳಾಗಿರುವ ರಸ್ತೆಗಳನ್ನು ಪ್ರಸ್ತಾವಿಸಬಾರದು.

5. ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಅತೀ ಅವಶ್ಯವಿರುವ ಸೇತುವೆಗಳ ನಿರ್ಮಾಣ/ಪುನರ್ ನಿರ್ಮಾಣ ಕಾಮಗಾರಿ ಗಳನ್ನು ಆದ್ಯತೆ ಮೇರೆಗೆ ತಯಾರಿಸಿ ಪ್ರತ್ಯೇಕವಾಗಿ ಸಲ್ಲಿಸುವುದು.

6. ಸೇತುವೆ ಕಾಮಗಾರಿಗಳ ನಿರ್ಮಾಣ/ಪುನರ್ ನಿರ್ಮಾಣ ಪ್ರಸ್ತಾವನೆ ಗಳಲ್ಲಿ ಸೇತುವೆ ನಿರ್ಮಾಣದ ನಿಖರವಾದ ಸರಪಳಿಯನ್ನು ಕಡ್ಡಾಯ ವಾಗಿ ನಮೂದಿಸುವುದು.

7. ಕಾಮಗಾರಿಗಳು ಅನುಮೋದನೆಯಾದ ನಂತರ ಬದಲಿ ಪ್ರಸ್ತಾವನೆ ಯನ್ನು ಸಲ್ಲಿಸಬಾರದು.

8. ಪ್ರಸ್ತಾವಿತ ಕಾಮಗಾರಿಗಳು ಇನ್ನಿತರೇ ಕಾರ್ಯಕ್ರಮದಲ್ಲಿ ಪ್ರಸ್ತಾ ವಿಸದೇ/ಸೇರ್ಪಡೆಯಾಗದೇ ಇರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

9. ನಬಾರ್ಡ ಕಾಮಗಾರಿಗಳ ಪರಿಗಣಿಸಬಹುದಾದ ಗ್ರಾಮೀಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಬಾರ್ಡಗೆ ನಿಯಮಾವಳಿಗೆ ಒಪ್ಪುವಂತಹ ಅರ್ಹ ಕಾಮಗಾರಿಗಳ ಪ್ರಸ್ತಾವನೆ ಇಲ್ಲದಿದ್ದಲ್ಲಿ ಇದನ್ನು ಕಡ್ಡಾಯವಾಗಿ ಧೃಢೀಕರಿಸುವುದು.

10. ಯಾವುದೇ ಕಾರಣಕ್ಕೂ ಹಳ್ಳಿ ರಸ್ತೆಗಳ ಅಭಿವೃದ್ಧಿ ಅಥವಾ ಅಂತಹ ರಸ್ತೆಗಳ ಮೇಲೆ ಸೇತುವೆ ನಿರ್ಮಾಣ ಪ್ರಸ್ತಾವನೆಯನ್ನು ಸಲ್ಲಿಸಬಾರದು.

ಸಾರ್ವಜನಿಕ ಉದ್ದಿಮೆಗಳ ಪುನರ್ ಚೇತನ

5310 (5922); ಶ್ರೀ ಬಸವರಾಜ ಎಸ್. ಬೊಮ್ಮಾಯಿ (ಶಿಗ್ಗಾಂವ್)

ಅ) ಸರ್ಕಾರದ ಸಮೂಹದಲ್ಲಿರುವ ಸಾರ್ವಜನಿಕ ಉದ್ಯಮಗಳಾವುವು; (ವಿವರ ಒದಗಿಸುವುದು); ಸಾರ್ವಜನಿಕ ಉದ್ಯಮಗಳನ್ನು ಖಾಸಗೀ ಕರಣದ ಬಗ್ಗೆ ಸರ್ಕಾರ ಚಿಂತಿಸುತ್ತಿದೆಯೇ;

ಆ) 2015–16ರ ಒಟ್ಟು ಗೂಡಿದ ಲಾಭ–ನಷ್ಟವೆಷ್ಟು; (ವಿವರ ಒದಗಿಸು ವುದು);